ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

**E-mail ID: icpssarakar@gmail.com** **Ph.No.080-22879382**

ಸಂಖ್ಯೆ: ಐಸಿಪಿಎಸ್/ದತ್ತು-24/2017-18 ದಿನಾಂಕ:04-04-2018

ಸುತ್ತೋಲೆ

ವಿಷಯ: ಒಂದೇ ಕುಟುಂಬದ ಒಡಹುಟ್ಟಿದ (Siblings) ಸಹೋದರ/ಸಹೋದರಿ ಮಕ್ಕಳನ್ನು ದತ್ತು ನೀಡುವಾಗ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಮಕ್ಕಳನ್ನು ಬೇರ್ಪಡಿಸುವ ಕುರಿತು.

ಉಲ್ಲೇಖ: ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ನವದೆಹಲಿ ಇವರ ಪತ್ರ ಸಂಖ್ಯೆ:CARA/CIR/2017, Dated:13-02-2018.

* * * * * *

ಉಲ್ಲೇಖಿತ ಪತ್ರದಲ್ಲಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ, ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ, ನವದೆಹಲಿ ಇವರು ಒಡಹುಟ್ಟಿದ (Siblings) ಸಹೋದರ/ಸಹೋದರಿಯರನ್ನು ದತ್ತು ನೀಡುವಾಗ ಅನುಸರಿಸಬೇಕಾದ ದತ್ತು ಪ್ರಕ್ರಿಯೆ ಕುರಿತು ಸುತ್ತೋಲೆ ಹೊರಡಿಸಿದ್ದು, ಅದರ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

1. ಪ್ರಸಕ್ತ ಬಾಲ ನ್ಯಾಯ ಕಾಯ್ದೆ ಪೋಷಣೆ ಮತ್ತು ರಕ್ಷಣೆ 2015 ಮತ್ತು ದತ್ತು ಅಧಿಸೂಚನೆ-2017 ರ ಪ್ರಕಾರ ಒಡಹುಟ್ಟಿದ (Siblings) ಸಹೋದರ/ಸಹೋದರಿ ಮಕ್ಕಳನ್ನು ಒಂದೇ ಕುಟುಂಬಕ್ಕೆ ದತ್ತು ನೀಡಬೇಕು.

2. ದತ್ತು ಪೋಷಕರಿಗೆ ಒಂದೇ ಕುಟುಂಬದ ಒಡಹುಟ್ಟಿದ (Siblings) ಸಹೋದರ/ಸಹೋದರಿ ಮಕ್ಕಳನ್ನು ಆಯ್ಕೆ ಮಾಡಲು ಅವಕಾಶವಿರುತ್ತದೆ, ಎರಡು ಮಕ್ಕಳನ್ನು ದತ್ತು ತೆಗೆದುಕೊಳ್ಳಲು ಪೋಷಕರು ಸಿದ್ದವಿದ್ದರೂ ಕೂಡ, ಬಯಸುವ ವಯಸ್ಸಿನ ಮಕ್ಕಳ ಲಭ್ಯತೆಯು ತೀರಾ ವಿರಳವಾಗಿರುತ್ತದೆ. ಇದರಿಂದ ಒಡ ಹುಟ್ಟಿದ ಮಕ್ಕಳನ್ನು ದತ್ತು ಪ್ರಕ್ರಿಯೆಯಲ್ಲಿ ತೊಡಗಿಸುವುದು ತುಂಬಾ ಕಷ್ಟಕರ. ಅದರಲ್ಲಿಯೂ ಒಡಹುಟ್ಟಿದ (Siblings) ಸಹೋದರ/ಸಹೋದರಿ ಮಕ್ಕಳು 3 ಹಾಗೂ 3 ಕ್ಕಿಂತ ಹೆಚ್ಚು ಇದ್ದಾಗ ದತ್ತು ಪೋಷಕರು 2 ಕ್ಕಿಂತ ಹೆಚ್ಚು ಮಕ್ಕಳ ಜವಾಬ್ದಾರಿಯನ್ನು ವಹಿಸಲು ಸಿದ್ದರಿರುವುದಿಲ್ಲ. ಇದರಿಂದ ಈ ಮಕ್ಕಳನ್ನು CARINGS immediate placement category ತೋರಿಸಲಾಗುತ್ತದೆ.

3. ಕೆಲವು ಸಂದರ್ಭಗಳಲ್ಲಿ ಒಡಹುಟ್ಟಿದ (Siblings) ಸಹೋದರ/ಸಹೋದರಿ ಮಕ್ಕಳಲ್ಲಿ ಒಂದು ಮಗು ದತ್ತುಗೆ ಹೋಗಲು ಇಚ್ಚೆಪಟ್ಟರೆ ಇನ್ನೊಂದು ಮಗು ದತ್ತುಗೆ ಹೋಗಲು ಇಚ್ಚಿಸುವುದಿಲ್ಲ. ಇಂತಹ ಸಂದರ್ಭದಲ್ಲಿ ದತ್ತು ಪೋಷಕರ ಹಾಗೂ ವಿಶೇಷ ದತ್ತು ಸಂಸ್ಥೆಯ ಮನವಿಯ ಮೇರೆಗೆ

ಮಗುವಿನ ಭವಿಷ್ಯದ ಹಿತ ದೃಷ್ಟಿಯಿಂದ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದ Relaxation Committee ಯ ಒಪ್ಪಿಗೆಯನ್ನು ಪಡೆದು ಮಗುವನ್ನು ದತ್ತು ನೀಡಲಾಗುತ್ತದೆ. ಹಲವಾರು ಸಂದರ್ಭಗಳಲ್ಲಿ ಮೇಲಿನಂತೆ ನಿರ್ದಾರ ತೆಗೆದುಕೊಳ್ಳಲು ಸಾಧ್ಯವಾಗದೆ ಮಕ್ಕಳು ಮಕ್ಕಳ ಪಾಲನಾ ಸಂಸ್ಥೆ ಮತ್ತು ವಿಶೇಷ ದತ್ತು ಸಂಸ್ಥೆಗಳಲ್ಲಿಯೇ ಉಳಿಯುತ್ತವೆ.

4. ಒಡಹುಟ್ಟಿದ (Siblings) ಸಹೋದರ/ಸಹೋದರಿಯರನ್ನು ದತ್ತು ಕಾರ್ಯಕ್ರಮಕ್ಕೆ ಅಳವಡಿಸುವುದನ್ನು ಖಾತರಿಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದ Steering Committee ಯಲ್ಲಿ ನಿರ್ಧರಿಸಿರುವಂತೆ ಮಕ್ಕಳನ್ನು ಬೇರ್ಪಡಿಸುವ ಸಂದರ್ಭಗಳಲ್ಲಿ ಪ್ರಕರಣಗಳನ್ನು ಅಧ್ಯಯನ ಮಾಡಿ ಮಕ್ಕಳ ಭವಿಷ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಬಾಲ ನ್ಯಾಯ ಕಾಯ್ದೆ–2015 ರ ಸಾಮಾನ್ಯ ತತ್ವಗಳಾದ ಸೆಕ್ಷನ್ 3 ರ ಅನುಸಾರ (ಮಕ್ಕಳ ಪೋಷಣೆ ಮತ್ತು ರಕ್ಷಣೆ ಕಾಯ್ದೆ–2015) ಕ್ರಮವಹಿಸಲು ತಿಳಿಸಿರುತ್ತಾರೆ.

5. **ಮಕ್ಕಳನ್ನು ಬೇರ್ಪಡಿಸುವ ಸಂದರ್ಭದಲ್ಲಿ ಮಗುವಿನ ಒಪ್ಪಿಗೆಯ ಪತ್ರದೊಂದಿಗೆ ವಿಶೇಷ ದತ್ತು ಸಂಸ್ಥೆ/ಮಕ್ಕಳ ಪಾಲನಾ ಸಂಸ್ಥೆ ಹಾಗೂ ಮಕ್ಕಳ ಕಲ್ಯಾಣ ಸಮಿತಿಯ ಅಭಿಪ್ರಾಯದೊಂದಿಗೆ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಿರುತ್ತದೆ.**

6. ಒಡಹುಟ್ಟಿದ (Siblings) ಸಹೋದರ/ಸಹೋದರಿಯರನ್ನು ಬೇರ್ಪಡಿಸಬಹುದಾದ ಕೆಲವು ಸಂದರ್ಭಗಳು ಈ ಕೆಳಗಿನಂತಿವೆ.
   ಅ. ಒಡಹುಟ್ಟಿದ (Siblings) ಸಹೋದರ/ಸಹೋದರಿಯ ನಡುವಿನ ವಯಸ್ಸಿನ ಅಂತರ ಹೆಚ್ಚಾಗಿರುವಾಗ
   ಆ. ಒಡಹುಟ್ಟಿದ (Siblings) ಸಹೋದರ/ಸಹೋದರಿಯರಲ್ಲಿ ಒಂದು ಮಗು ವಿಶೇಷ ಅಗತ್ಯವಿರುವ ಮಗುವಾಗಿದ್ದರೆ
   ಇ. ಒಡಹುಟ್ಟಿದ (Siblings) ಸಹೋದರ/ಸಹೋದರಿಯರಲ್ಲಿ ಒಂದು ಮಗು ದತ್ತುಗೆ ಹೋಗಲು ನಿರಾಕರಿಸಿದಂತಹ ಸಂದರ್ಭಗಳು.

ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ
ಸೊಸೈಟಿ, ಬೆಂಗಳೂರು.

ಪ್ರತಿಯನ್ನು:
1. ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಎಲ್ಲಾ ವಿಶೇಷ ದತ್ತು ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.